# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 146(15) |
| ಸದಸ್ಯರ ಹೆಸರು | ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.08.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಮಾನವ-ಹುಲಿ ಸಂಘರ್ಷದ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಮಾನವ-ಹುಲಿ ಸಂಘರ್ಷದ ಪ್ರಕರಣಗಳು ಹೆಚ್ಚಾಗಲು ಸರ್ಕಾರ ಗುರುತಿಸಿರುವ ವೈಜ್ಞಾನಿಕ ಮತ್ತು ಇತರ ಕಾರಣಗಳೇನು; | ಮಾನವ-ಹುಲಿ ಸಂಘರ್ಷದ ಪ್ರಕರಣಗಳು ಹೆಚ್ಚಾಗಲು ಸರ್ಕಾರ ಗುರುತಿಸಿರುವ ವೈಜ್ಞಾನಿಕ ಕಾರಣಗಳು ಈ ಕೆಳಕಂಡಂತಿರುತ್ತದೆ.<br>• ಒಂದೇ ಪ್ರದೇಶದಲ್ಲಿ ಸತತವಾಗಿ ಹುಲಿಗಳ ಸಂಖ್ಯೆ ಹೆಚ್ಚಾದಂತೆ Homerange / territoryಯು ಕಡಿಮೆಯಾದಾಗ ಹುಲಿಗಳ ನಡುವೆ ಕಾದಾಟ(**Territorial fight**)ವಾಗಿ, ಬಲಿಷ್ಠ ಹುಲಿಗಳು ಆ ಪ್ರದೇಶಗಳನ್ನು ಆಕ್ರಮಿಸಿಕೊಂಡು ಸೋತ, ವಯಸ್ಸಾದ, ಗಾಯಗೊಂಡ ಹುಲಿಗಳನ್ನು ಸದರಿ ಪ್ರದೇಶದಿಂದ ಹೊರದೂಡುತ್ತವೆ, **ಸದರಿ ಹುಲಿಗಳು ಸುಲಭ ಬೇಟೆಯನ್ನು ಹುಡುಕಿ ಅರಣ್ಯದಿಂದ ಹೊರಬರುತ್ತವೆ.**<br>• ಮರಿಗಳು ಎರಡು(02) ವರ್ಷಗಳಾದ ನಂತರ ಅವು ದೊಡ್ಡದಾಗಿ ತಮ್ಮದೇ ಪ್ರದೇಶ ಹುಡುಕುತ್ತಾ ಕಾಡಿನಿಂದ ಹೊರಬರುವ ಸಾಧ್ಯತೆ ಹೆಚ್ಚಾಗಿರುತ್ತದೆ.<br>• ಹುಲಿಗಳ ಸಾಂದ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಹೆಣ್ಣು ಹುಲಿಗಳು ಸಂತಾನೋತ್ಪತ್ತಿ ಸಮಯದಲ್ಲಿ ತನ್ನ ಮರಿಗಳನ್ನು ಇತರ ಗಂಡು ಹುಲಿಗಳಿಂದ ರಕ್ಷಿಸಿಕೊಳ್ಳಲು ಮೂಲ ಆವಾಸಸ್ಥಾನದಿಂದ ಹೊರಬರುತ್ತವೆ.<br>• ಅರಣ್ಯದಿಂದ ಕಾಡಂಚಿನ ಪ್ರದೇಶಗಳಲ್ಲಿರುವ ಕೆರೆ-ಕಟ್ಟೆ, ಹಳ್ಳ-ಕೊಳ್ಳ, ಕಬ್ಬಿನ ಗದ್ದೆ, ಬಾಳೆಯ ತೋಟಗಳು, ನಾಲಬದುವಿನ |

| | | |
|---|---|---|
| | | ಗಿಡಗಂಟೆ ಪ್ರದೇಶಗಳಲ್ಲಿ ವಾಸ್ತವ್ಯ ಮತ್ತು ಸಂಚಾರ ಪ್ರಾರಂಭಿಸುತ್ತವೆ.<br>• ಒಂದು ಪ್ರದೇಶದಲ್ಲಿ ಹುಲಿಗಳ ಸಾಂದ್ರತೆ ಹೆಚ್ಚಾದಂತೆ, ಬೆಳೆಯುತ್ತಿರುವ **ಉಪವಯಸ್ಕ ಹುಲಿಗಳು** ಹಾಗೂ ತಮ್ಮ ಮೂಲ ಪ್ರದೇಶದಿಂದ ಸ್ಥಳಾಂತರಗೊಂಡಿರುವ **ವೃದ್ಧ ಅಥವಾ ದೌರ್ಬಲ್ಯಗೊಂಡ ಹುಲಿಗಳು**, ತಮ್ಮ ಜನ್ಮಸ್ಥಳ ಅಥವಾ ಹಿಂದಿನ ವಾಸಸ್ಥಳದಿಂದ ದೂರ ಸರಿದು, ಅರಣ್ಯದೊಳಗೆ ಹೊಸ ವಾಸಸ್ಥಳವನ್ನು ಸ್ಥಾಪಿಸಿಕೊಳ್ಳಲು ಮುಂದಾಗುತ್ತವೆ.<br>ಆದರೆ, ಅರಣ್ಯ ಪ್ರದೇಶಗಳ **ವಿಘಟನೆ (fragmentation)** ಅಥವಾ ವಿವಿಧ ಅರಣ್ಯ ಪ್ರದೇಶಗಳ ನಡುವೆ **ಆವಾಸ ಸಂಪರ್ಕದ ಕೊರತೆ (lack of habitat connectivity)** ಇರುವ ಸಂದರ್ಭದಲ್ಲಿ, ಇಂತಹ ಹುಲಿಗಳು ಹೊಸ ಪ್ರದೇಶವನ್ನು ಹುಡುಕುವ ವೇಳೆ ಮಾನವ ಬಳಕೆಯ ಪ್ರದೇಶಗಳಿಗೆ ಪ್ರವೇಶಿಸಿ ಅಲ್ಲಿ ತಮ್ಮ ಹೊಸ ವಾಸಸ್ಥಳವನ್ನು ಸ್ಥಾಪಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇದರಿಂದ ಮಾನವರು ಹಾಗೂ ಜಾನುವಾರುಗಳೊಂದಿಗೆ ಮಾನವ–ಹುಲಿ ಸಂಘರ್ಷ ಉಂಟಾಗುವ ಸಾಧ್ಯತೆ ಹೆಚ್ಚುತ್ತದೆ. |
| ಇ) | ಹುಲಿಗಳ ಸಂಖ್ಯೆ ಹೆಚ್ಚಾದಂತೆ, ಅದಕ್ಕನುಗುಣವಾಗಿ ಅವುಗಳ ನೈಸರ್ಗಿಕ ಆವಾಸಸ್ಥಾನದ ವಿಸ್ತೀರ್ಣ ಹೆಚ್ಚುತ್ತಿಲ್ಲ; ಹಾಗಾಗಿ ಅವುಗಳು ಕಾಡಿನ ಸುತ್ತಮುತ್ತಲಿರುವ ಬೀಳು, ಹಳ್ಳಗಳಲ್ಲಿರುವ ಕುರುಚಲು, ಕಾಫಿ ತೋಟಗಳಂತಹ ಪ್ರದೇಶಗಳನ್ನೇ ವಾಸಸ್ಥಾನ ಮಾಡಿಕೊಂಡಿರುವುದು ಮಾನವ-ಹುಲಿ ಸಂಘರ್ಷಕ್ಕೆ ಅತ್ಯಂತ ಪ್ರಮುಖ ಕಾರಣವಾಗಿದೆ. ಸದರಿ ಕಾರಣದಿಂದಾಗಿ ಹುಲಿಗಳ ಸಂಖ್ಯೆ ಹೆಚ್ಚಳಕ್ಕೆ ಅನುಗುಣವಾಗಿ ಅವುಗಳ ನೈಸರ್ಗಿಕ ಆವಾಸಸ್ಥಾನದ ವಿಸ್ತೀರ್ಣವನ್ನು ಹೆಚ್ಚಿಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದ್ದು, ಈ ಸಂಬಂಧ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳು; | ಅರಣ್ಯ ಪ್ರದೇಶಗಳ ವಿಘಟನೆ (fragmentation) ಅಥವಾ ವಿವಿಧ ಅರಣ್ಯ ಪ್ರದೇಶಗಳ ನಡುವೆ ಆವಾಸ ಸಂಪರ್ಕದ ಕೊರತೆ (lack of habitat connectivity) ಇರುವ ಕಾರಣ ಆನೆಗಳು ಮತ್ತು ಇತರೆ ವನ್ಯಪ್ರಾಣಿಗಳು ಒಂದು ಅರಣ್ಯ ಪ್ರದೇಶದಿಂದ ಇನ್ನೊಂದು ಅರಣ್ಯ ಪ್ರದೇಶಕ್ಕೆ ಅಡೆತಡೆ ಇಲ್ಲದೇ ಸಂಚರಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಹುಲಿಗಳ ನೈಸರ್ಗಿಕ ಆವಾಸಸ್ಥಾನಕ್ಕೆ ಸಂಬಂಧಿಸಿದಂತೆ ವನ್ಯಜೀವಿ ಕಾರಿಡಾರ್ (Wildlife Corridor) ಅನುಷ್ಠಾನಗೊಳಿಸಬೇಕಾಗಿರುತ್ತದೆ.<br>ಇದಕ್ಕಾಗಿ ತಯಾರಿಸಿರುವ ವನ್ಯಜೀವಿ ಕಾರಿಡಾರ್ (Wildlife Corridor) ಪಾಲಿಸಿಯ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| ಈ) | ಮಾನವ-ಹುಲಿ ಸಂಘರ್ಷವನ್ನು ಗಣನೀಯವಾಗಿ ತಪ್ಪಿಸಲು ಹಾಗೂ ಹುಲಿಗಳ ಭವಿಷ್ಯದ ಹಿತದೃಷ್ಟಿಯಿಂದ ಅವುಗಳ ನೈಸರ್ಗಿಕ ಆವಾಸಸ್ಥಾನ ಮತ್ತು ಪರಿಸರ ವ್ಯವಸ್ಥೆಯ ಸಂರಕ್ಷಣೆಗೆ ಒತ್ತು ನೀಡುವುದು, ಗಸ್ತು ವ್ಯವಸ್ಥೆಯನ್ನು ಬಲಪಡಿಸುವುದು, ಕಳ್ಳಬೇಟೆ ತಡೆ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ, ಸ್ಥಳೀಯ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಸೇರಿದಂತೆ ಹುಲಿಗಳೊಂದಿಗೆ ಜನರು ಸುರಕ್ಷಿತವಾಗಿ ಬದುಕಬಲ್ಲ ಪರಿಸರ ನಿರ್ಮಿಸಬೇಕಾದ ಅಗತ್ಯತೆ ಇದ್ದು, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ಮಾನವ-ಹುಲಿ ಸಂಘರ್ಷವನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>1. ರಾಜ್ಯದಲ್ಲಿ 04 ವರ್ಷಗಳಿಗೊಮ್ಮೆ ಹಾಗೂ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪ್ರತೀ ವರ್ಷ ಹುಲಿ ಗಣತಿ ಕಾರ್ಯ ಕೈಗೊಂಡು ಹುಲಿಗಳ ಸಂಖ್ಯೆಯನ್ನು ಅಂದಾಜಿಸಲಾಗುತ್ತಿದ್ದು, ಸದರಿ ವರದಿಗಳನ್ವಯ ಹುಲಿಗಳ ಸಂತತಿ ರಕ್ಷಣೆ/ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>2. ಅರಣ್ಯೇತರ ಮಾನವ ವಸತಿ ಪ್ರದೇಶಗಳಲ್ಲಿ ಕಾಣಿಸಿಕೊಂಡು ಮಾನವ-ಹುಲಿ ಸಂಘರ್ಷಕ್ಕೆ ಕಾರಣವಾಗುವ ಹುಲಿಯನ್ನು ನುರಿತ ಕುಮ್ಕಿ ಸಾಕಾನೆಗಳನ್ನು ಉಪಯೋಗಿಸಿಕೊಂಡು ಮರಳಿ ಅರಣ್ಯ ಪ್ರದೇಶಕ್ಕೆ ಹಿಮ್ಮೆಟ್ಟಿಸುವ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗುತ್ತಿದೆ.<br>3. ಹುಲಿಯನ್ನು ಮರಳಿ ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ, ಅಂತಹ ಮಾನವ-ಹುಲಿ ಸಂಘರ್ಷಕ್ಕೆ ಕಾರಣವಾದ ಹುಲಿಯನ್ನು ನಿರ್ದಿಷ್ಟವಾಗಿ ಗುರುತಿಸಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿಗಳನ್ವಯ ಸೆರೆಹಿಡಿದು, ವನ್ಯಜೀವಿ ಪಶುವೈದ್ಯಾಧಿಕಾರಿಗಳ ಸಲಹೆಯ ಮೇರೆಗೆ ಪುನರ್ವಸತಿ ಕೇಂದ್ರ/ ಸೂಕ್ತ ಅರಣ್ಯ ಆವಾಸಸ್ಥಾನಕ್ಕೆ ಸ್ಥಳಾಂತರಿಸಲು ಕ್ರಮವಹಿಸಲಾಗುತ್ತಿದೆ.<br>4. ವನ್ಯಜೀವಿ ವನ್ಯಜೀವಿಧಾಮದ ಅನುಮೋದಿತ ನಿರ್ವಹಣಾ ಯೋಜನೆಯ ಪ್ರಕಾರ ಆವಾಸಸ್ಥಾನ, ಜಲಸಂಪನ್ಮೂಲ ಅಭಿವೃದ್ಧಿ ಕಾಮಗಾರಿಗಳು, ಅನಗತ್ಯವಾಗಿ ಬೆಳೆದ ಕಳೆಗಿಡಗಳನ್ನು ನಿರ್ಮೂಲನೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br>5. ಇಲಾಖಾ ಸಿಬ್ಬಂದಿಗಳು ನಿರಂತರ ಗಸ್ತು ಸಂಚರಿಸಿ Mstripes ತಂತ್ರಾಂಶದ ಮೂಲಕ ಗಸ್ತಿನ ವಿವರಗಳನ್ನು ದಾಖಲಿಸಿ, ಅರಣ್ಯದಲ್ಲಿ ಹಾಗೂ ಅರಣ್ಯದಂಚಿನ ಪ್ರದೇಶಗಳಲ್ಲಿ ಉರುಳು ಪತ್ತೆ ಕಾರ್ಯಾಚರಣೆ, ಸೌರ ಬೇಲಿಗಳಿಗೆ ಅಕ್ರಮ ವಿದ್ಯುತ್ |

| | | |
|---|---|---|
| | | ಸಂಪರ್ಕ ಒದಗಿಸಿರುವುದನ್ನು ತಡೆಗಟ್ಟುವ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ.<br>6. ಕಳ್ಳಬೇಟೆ ತಡೆ ಶಿಬಿರಗಳನ್ನು ಸ್ಥಾಪಿಸಿ ವನ್ಯಜೀವಿಗಳ ಬೇಟೆಯಾಡುವುದನ್ನು ತಡೆಗಟ್ಟಲು ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>7. ಕಾಡಂಚಿನ ಗ್ರಾಮಗಳಲ್ಲಿ ವನ್ಯಪ್ರಾಣಿಗಳು ಬಂದಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಎಚ್ಚರಿಕೆ/ ಮಾಹಿತಿ ನೀಡಲು **Advance alert system** ಅನ್ನು ತಯಾರಿಸಲಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ನೇರವಾಗಿ ಸಂದೇಶಗಳನ್ನು ಕಳುಹಿಸಲಾಗುತ್ತಿದೆ.<br>8. ಥರ್ಮಲ್ ಡ್ರೋನ್‌ಗಳ ಸಹಾಯದಿಂದ ವನ್ಯಪ್ರಾಣಿಗಳ ಚಲನ-ವಲನಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿರುತ್ತದೆ.<br>9. ವಿವಿಧ ವಿಭಾಗಗಳಿಂದ ಲಭ್ಯವಾಗುವ ಮಾಹಿತಿಯನ್ನು ರಿಯಲ್-ಟೈಮ್‌ನಲ್ಲಿ ಸಂಗ್ರಹಿಸಿ, ವಿಶ್ಲೇಷಿಸಿ, ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಕ್ಷೇತ್ರ ಮಟ್ಟದ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಕೇಂದ್ರ ಸ್ಥಾನದಲ್ಲಿ ಸಂಯೋಜಿತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ (ICCC) ಹಾಗೂ 12 ವಿಭಾಗಗಳಲ್ಲಿ ವಿಭಾಗೀಯ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ (DCCC) ಸ್ಥಾಪಿಸಲಾಗುತ್ತಿದೆ.<br>10. ವನ್ಯಜೀವಿ ಸಂರಕ್ಷಣೆ ಹಾಗೂ ಮಾನವ-ವನ್ಯಜೀವಿ ಸಂಘರ್ಷ ನಿರ್ವಹಣೆಗೆ ಸಂಬಂಧಿಸಿದಂತೆ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿಯ ಕೌಶಲ್ಯ ಮತ್ತು ಕಾರ್ಯದಕ್ಷತೆಯನ್ನು ನಿರಂತರವಾಗಿ ಸುಧಾರಿಸಲು ಪುನಶ್ಚೇತನ ತರಬೇತಿ (Refresher Training) ಯನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ. |

**ಇ-ಸಂಖ್ಯೆ: ಅಪಜೀ 237 ಎಫ್‌ಡಬ್ಲ್ಯೂಎಲ್ 2026**

**(ರಾಮಲಿಂಗಾರೆಡ್ಡಿ)**
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು